**In the NEWS**

**PRAJAVANI**

Date: Feb 02, 2016 | Page: 04

Edition: Mysore | Language: Kannada

# ಫ್ರೀ ಬೇಸಿಕ್ಸ್: ವಸ್ತುನಿಷ್ಠವಾಗಿದ್ದರೆ ಮಾತ್ರ ನಿರುಪದ್ರವಿ

ಪ್ರಜಾವಾಣಿ ವಾರ್ತೆ

ಮೈಸೂರು: 'ಫ್ರೀ ಬೇಸಿಕ್ಸ್' ಮಾದರಿಯ ಇಂಟರ್ನೆಟ್ ಸೇವೆಗಳು ವಸ್ತುನಿಷ್ಠ ಸ್ವರೂಪವನ್ನು ಹೊಂದಿದ್ದರೆ ಮಾತ್ರ ಸಮಾಜಕ್ಕೆ ಯಾವುದೇ ಸಮಸ್ಯೆಯಾಗದು ಎಂದು ಬೆಂಗಳೂರಿನ 'ಇನ್ಫರ್ಮೇಟಿಕ್ಸ್ ಇಂಡಿಯಾ' ಸಂಸ್ಥೆ ನಿರ್ದೇಶಕ ಸತ್ಯನಾರಾಯಣ ಅಭಿಪ್ರಾಯ ವ್ಯಕ್ತಪಡಿಸಿದರು.

ಮೈಸೂರು ವಿಶ್ವವಿದ್ಯಾನಿಲಯ ಮಾಹಿತಿ ಮತ್ತು ಗ್ರಂಥಾಲಯ ವಿಜ್ಞಾನ ವಿಭಾಗದ ಹಿರಿಯ ವಿದ್ಯಾರ್ಥಿಗಳ ಸಂಘವು ಎಸ್‌ಡಿಎಂ– ಐಎಂಡಿ ಕಾಲೇಜಿನಲ್ಲಿ ಸೋಮವಾರ ಏರ್ಪಡಿಸಿದ್ದ 'ನೆಟ್ ನ್ಯೂಟ್ರಾಲಿಟಿ– ಫ್ರೀ ಬೇಸಿಕ್ಸ್' ಕಾರ್ಯಕ್ರಮದಲ್ಲಿ ಅವರು ವಿಚಾರ ಮಂಡಿಸಿದರು.

ಈಗಿನ ಕಾಲದಲ್ಲಿ ವೈಯಕ್ತಿಕವಾಗಿ ಯಾರೂ ವಸ್ತುನಿಷ್ಠರಾಗಿಲ್ಲ; ಎಲ್ಲರೂ ವ್ಯಕ್ತಿನಿಷ್ಠರೇ ಆಗಿರುತ್ತಾರೆ. ಆದರೆ, ಸಾಮೂಹಿಕ ಹಿತದೃಷ್ಟಿಯ ಪ್ರಶ್ನೆ ಬಂದಾಗ ವಸ್ತುನಿಷ್ಠತೆ ಅನಿವಾರ್ಯವಾಗುತ್ತದೆ. ಸರ್ಕಾರ ವಸ್ತುನಿಷ್ಠವಾಗಿ ಕೆಲಸ ಮಾಡಬೇಕಾಗುತ್ತದೆ. ಯಾವಾಗ ಸರ್ಕಾರವೇ ವ್ಯಕ್ತಿನಿಷ್ಠ ಧೋರಣೆಗಳನ್ನು ಅನುಸರಿಸುತ್ತದೆಯೊ, ಆಗ ಸಾಮೂಹಿಕ ಹಿತಕ್ಕೆ ದಕ್ಕೆ ಬರುತ್ತದೆ ಎಂದು ಅಭಿಪ್ರಾಯಪಟ್ಟರು.

'ಫ್ರೀ ಬೇಸಿಕ್ಸ್' ಪರಿಕಲ್ಪನೆಯು ಅಂತರ್ಜಾಲ ಸೇವೆಯನ್ನು ಉಚಿತವಾಗಿ ನೀಡುವುದೇ ಆಗಿದ್ದರೂ, ನಂತರ ಅದಕ್ಕೆ ಶುಲ್ಕವನ್ನು ವಿಧಿಸುವ ಹುನ್ನಾರ ಅಡಗಿದೆ ಎಂದು ಹೇಳಲಾಗುತ್ತಿದೆ. ಅಷ್ಟೇ ಅಲ್ಲದೇ, ಉಚಿತವಾಗಿ ಅಂತರ್ಜಾಲ ಸೇವೆಯನ್ನು ನೀಡುವ ಮೂಲಕ, ಕೆಲವು ವ್ಯಕ್ತಿನಿಷ್ಠ ವಿಚಾರಗಳನ್ನು ಬಳಕೆದಾರರ ಮೇಲೆ ಹೇರುವ ಪ್ರಯತ್ನ ಇರಲಿದೆ ಎಂಬ ಆರೋಪವಿದೆ. ಹೀಗಾಗದಂತೆ ಎಚ್ಚರವಹಿಸಬೇಕಿದೆ ಎಂದು ಅವರು ಹೇಳಿದರು.



ಮೈಸೂರಿನ ಎಸ್‌ಡಿಎಂ– ಐಎಂಡಿ ಕಾಲೇಜಿನಲ್ಲಿ ಸೋಮವಾರ ನಡೆದ 'ಫ್ರೀ ಬೇಸಿಕ್ಸ್' ವಿಚಾರಸಂಕಿರಣದಲ್ಲಿ ಡಾ.ಶಾಲಿನಿ ವಿ. ಅರಸ್ ಮಾತನಾಡಿದರು. ಸುಧೀರ್ ಸೋಸಲೆ, ಸತ್ಯನಾರಾಯಣ, ಕಲ್ಪೇಶ್ ಮೆಹ್ತಾ ಇದ್ದಾರೆ

ಅಂತರ್ಜಾಲ ಸೇವೆಗಳನ್ನು ನೀಡುವ ಸಂಸ್ಥೆಗಳು ಹಾಗೂ ಅಂತರ್ಜಾಲ ಹೂರಣವನ್ನು ರಚಿಸುವ ಸಂಸ್ಥೆಗಳಿಗೂ ವ್ಯತ್ಯಾಸವಿದೆ. ಫೇಸ್‌ಬುಕ್ ಅಂತರ್ಜಾಲ ಸೇವೆಯನ್ನು ನೀಡುವ ಸಂಸ್ಥೆಯಲ್ಲ. ಬದಲಿಗೆ ಅದು, ಅಂತರ್ಜಾಲ ಹೂರಣವನ್ನು ಗ್ರಾಹಕರಿಗೆ ಒದಗಿಸುತ್ತದೆ. ಇವೆರಡರ ನಡುವಿನ ವ್ಯತ್ಯಾಸವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಿದೆ. ಆಗ 'ಫ್ರೀ ಬೇಸಿಕ್ಸ್' ಸಮಸ್ಯೆಗೆ ಸರಿಯಾದ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ಸಾರ್ವಜನಿಕ ಸೇವೆಗಳನ್ನು ನೀಡುವ ಸಂಸ್ಥೆಗಳು ಸಮುದಾಯದ ಹಿತವನ್ನು ಕಾಯಬೇಕು. ಸಾರ್ವಜನಿಕ ಸೇವೆಗಳನ್ನು ಖಾಸಗೀಕರಣಗೊಳಿಸಿದರೆ, ಏಕ ಸ್ವಾಮ್ಯದ ಭಯ ಮೂಡುತ್ತದೆ. ಅಂತರ್ಜಾಲದ ಮೇಲೆ ಏಕಸ್ವಾಮ್ಯ ಒಳ್ಳೆಯದಲ್ಲ. ಅದೇನಿದ್ದರೂ ಸರ್ಕಾರದ ವಶದಲ್ಲೇ ಇರಬೇಕು ಎಂದರು.

ರಾಷ್ಟ್ರೀಯ ಎಂಜಿನಿಯರುಗಳ ಸಂಸ್ಥೆಯ ಸುಧಾರಿತ ತಂತ್ರಜ್ಞಾಗಳ ತರಬೇತಿ ಕೇಂದ್ರದ ನಿರ್ದೇಶಕ ಸುಧೀರ್ ಸೋಸಲೆ ಮಾತನಾಡಿ, 'ಫ್ರೀ ಬೇಸಿಕ್ಸ್' ಮೂಲಕ ವಿಷಯ ಹೇರಿಕೆ ಅಪಾಯವನ್ನು ತಳ್ಳಿಹಾಕಲಾಗದು. ಇದರ ಮೂಲಕ ಯಾವುದೇ ವಿಚಾರವನ್ನು ಮುಚ್ಚಿಹಾಕಬಹುದು ಅಥವಾ ಆ ವಿಚಾರವನ್ನು ಪ್ರಚಾರಕ್ಕೆ ಒಳಪಡಿಸಬಹುದು. ಹೀಗಾದರೆ, ಅಂತರ್ಜಾಲ ಸೇವೆ ಅಪಾಯಕ್ಕೆ ಸಿಲುಕುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

'ಅಷ್ಟೇ ಅಲ್ಲದೇ, 'ಫ್ರೀ ಬೇಸಿಕ್ಸ್' ಮಾದರಿಯ ಸೇವೆಗಳಿಂದ ವೈಯಕ್ತಿಕ ಗೌಪ್ಯತೆ ಹಾಳಾಗುವ ಅಪಾಯವೂ ಇದೆ. ನಮ್ಮ ವೈಯಕ್ತಿಕ ಮಾಹಿತಿಯನ್ನು ಖಾಸಗಿ ಸಂಸ್ಥೆಗಳು ಪರಾಮರ್ಶಿಸುವ ಅಧಿಕಾರ ಪಡೆದುಕೊಳ್ಳುತ್ತವೆ. ಇದು ಅಪಾಯಕಾರಿ ವಿಚಾರ' ಎಂದು ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯದ ಅಂತರರಾಷ್ಟ್ರೀಯ ಮಾಹಿತಿ ನಿರ್ವಹಣಾ ಸಂಸ್ಥೆಯ ನಿರ್ದೇಶಕಿ ಡಾ.ಶಾಲಿನಿ ವಿ. ಅರಸ್, ಸ್ಟಾರ್ ಸಾಫ್ಟ್ ಇಂಡಿಯಾ ಸಂಸ್ಥಾಪಕ ಕಲ್ಪೇಶ್ ಮೆಹ್ತಾ ಮಾತನಾಡಿದರು.

ಎಸ್‌ಡಿಎಂ– ಐಎಂಡಿ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥೆ ಪ್ರೊ.ಮಾಲತಿ ಶ್ರೀರಾಂ, ಮೈಸೂರು ವಿಶ್ವವಿದ್ಯಾನಿಲಯ ಮಾಹಿತಿ ಮತ್ತು ಗ್ರಂಥಾಲಯ ವಿಜ್ಞಾನ ವಿಭಾಗದ ಹಿರಿಯ ವಿದ್ಯಾರ್ಥಿಗಳ ಸಂಘದ ಕಾರ್ಯದರ್ಶಿ ಡಾ.ಎಂ.ವಿ. ಸುನೀಲ್ ಭಾಗವಹಿಸಿದ್ದರು.

**Panel Discussion on 'Net Neutrality Vs Free Basics'**